ಕೊರೆಯಲಾಗಿರುವ ಕೊಳವೆ ಬಾವಿಗಳಿಗೆ ಪಂಪ್‌ಸೆಟ್ ಮತ್ತು ಇತರೆ ಸಾಮಗ್ರಿಗಳನ್ನು ಕೊಳ್ಳಲು ಫಲಾನಿಭವಿಗಳಿಗೆ ನೇರವಾಗಿ ಮಾರ್ಗಸೂಚಿಗಳಂತೆ ಅವಕಾಶ ಇರುವುದಿಲ್ಲ

ಆ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಪಂಪ್‌ಸೆಟ್ ಮತ್ತು ಇತರೆ ಸಾಮಗ್ರಿಗಳನ್ನು ಖರೀದಿಸಲು ಒಂದು ಉನ್ನತ ಮಟ್ಟದ ಸಮಿತಿಯನ್ನು ರಚಿಸಿದ್ದು, ಪಂಪ್‌ಸೆಟ್‌ಗಳ ಗುಣಮಟ್ಟ ಹಾಗೂ ನಿರ್ದಿಷ್ಟವಾದ ಗುಣವುಳ್ಳ ಪಂಪ್‌ಸೆಟ್‌ಗಳನ್ನು ಖರೀದಿಸಲು ಟೆಂಡರ್‌ನ್ನು ಕರೆಯಲಾಗುತ್ತದೆ' ಉನ್ನತ ಮಟ್ಟದ ಸಮಿತಿಯಲ್ಲಿ ದರವನ್ನು ನಿಗದಿ ಪಡಿಸಿದಂತೆ ಪಂಪ್‌ಸೆಟ್‌ಗಳನ್ನು ಖರೀದಿಸಲಾಗುತ್ತಿದೆ ಪಂಪ್‌ಸೆಟ್‌ಗಳ ಗುಣಮಟ್ಟದ ಬಗ್ಗೆ ಯಾವುದೇ ಆದ ದೂರುಗಳು ಫಲಾನುಭವಿಗಳಿಂದ ಬಂದಿರುವುದಿಲ್ಲ

ಇ) ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಗುಣಮಟ್ಟದ ಬಗ್ಗೆ ಯಾವುದೇ ಆದ ದೂರುಗಳೂ ಫಲಾನುಭವಿಗಳಿಂದ ಬಂದಿರುವುದಿಲ್ಲ

170(387) ಶ್ರೀ ಪದ್ಮನಾಭ ಕೊರಾರಿ (ವಿಟ್ಲ)

ಮಾನ್ಯ ಕಾರ್ಮಿಕ ಮತ್ತು ಅಲ್ಪ ಸಂಖ್ಯಾತ ಕಲ್ಯಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕಳೆದ ವರ್ಷದಲ್ಲಿ ರಾಜ್ಯದಲ್ಲಿ ಪತ್ತೆ ಹಚ್ಚಲಾದ ಬಾಲ ಕಾರ್ಮಿಕರ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು)

ಆ) ಬಾಲ ಕಾರ್ಮಿಕರ ನಿವಾರನೆಗೆ ಸರಕಾರ ಕೈಗೊಂಡ ಕ್ರಮಗಳೇನು?

ಇ) ಬಾಲ ಕಾರ್ಮಿಕರಿಂದ ಕೆಲಸ ಮಾಡಿಸುತ್ತಿರುವುದನ್ನು ಪತ್ತೆ ಹಚ್ಚಲಾದ ಸಂದರ್ಭದಲ್ಲಿ ಈ ಮಾಲೀಕರ ವಿರುದ್ಧ ಸರ್ಕಾರ ಯಾವ ರೀತಿಯ ಕ್ರಮ ಕೈಗೊಂಡಿದೆ?

ಈ) ಬಾಲ ಕಾರ್ಮಿಕರನ್ನು ಪತ್ತೆ ಹಚ್ಚಿದ ನಂತರ ಇವರ ಶಿಕ್ಷಣದ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ಹಾಗೂ ಇವರ ಕುಟುಂಬದ ಸಮಸ್ಯೆಯ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮವೇನು?

ಮಾನ್ಯ ಕಾರ್ಮಿಕ ಮತ್ತು ಅಲ್ಪ ಸಂಖ್ಯಾತ ಕಲ್ಯಣ ಸಚಿವರು

ಅ) ಕಳೆದ ವರ್ಷದಲ್ಲಿ ರಾಜ್ಯದಲ್ಲಿ ಪತ್ತೆ ಹಚ್ಚಲಾದ ಬಾಲ ಕಾರ್ಮಿಕರ ಸಂಖ್ಯೆ 5,292 (ಜಿಲ್ಲಾವಾರು ಮಾಹಿತಯನ್ನು ಅನುಬಂದದಲ್ಲಿ ನೀಡಲಾಗಿದೆ) ಪ್ರತಿ ಲಗತ್ತಿಸಿದೆ

ಆ) ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗಾಗಿ 2001 ರಲ್ಲಿ ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನ ಕ್ರಿಯಾ ಯೋಜನೆಯನ್ನು ಜಾರಿಗೊಳಿಸಿದ್ದು ಈ ಯೋಜನೆಯನ್ನು ಇಸವಿ 2012 ರವರೆಗೆ ವಿಸ್ತರಿಸಲಾಗಿದೆ ಈ ಯೋಜನೆಯ ಪ್ರಕಾರ ಕೈಗೊಂಡ ಕ್ರಮಗಳು ಈ ಕೆಳಗಿನಂತಿವೆ

ಅ) ಬಾಲ ಕಾರ್ಮಿಕ ಕಾಯ್ದೆಗಳನ್ನು ಜಾರಿಗೊಳಿಸುವ ಸಲುವಾಗಿ ಸರ್ಕಾರ ವಿವಧ ಇಲಾಖೆಗಳ 2,050 ಅಧಿಕಾರಿಗಳನ್ನು ಪರಿವೀಕ್ಷಕರನ್ನಾಗಿ ನೇಮಿಸಿದೆ ಬಾಲ ಕಾಮಿಖರ ತಪಾಸಣೆಗಾಗಿ ತಮಡಗಳನ್ನು ರಚಿಸಿಕೊಂಡು ಮೇಲಿಂದ ಮೇಲೆ ತಪಾಸಣೆ ನಡೆಸಿ, ಬಾಲ ಕಾರ್ಮಿಕರನ್ನು ಪತ್ತೆ ಮಡಿ, ಅವರನ್ನು ಬಿಡುಗಡೆಗೊಳಿಸಿ ಪುನರ್ವಸತಿ ಕಲ್ಪಿಸುವ ಕಾರ್ಯ ನಡೆಯುತ್ತಿವೆ ತಪ್ಪಿತಸ್ಥ ಮಾಲೀಕರ ವಿರುದ್ಧ ಬಾಲ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ 1986 ಅಥವಾ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ 1961 ಗಳ ಅನ್ವಯ ಮೊಕದ್ದಮೆಗಳನ್ನು ಹೂಡಲಾಗುತ್ತದೆ

ಆ) ಗುರುತಿಸಿದ ಎಲ್ಲಾ ಮಕ್ಕಳನ್ನು ವಿಶೇಷ ಪುನರ್ವಸತಿ ಕೇಂದ್ರಗಳಲ್ಲಿ ಅಥವಾ ಮುಖ್ಯ ವಾಹಿನಿ ಶಾಲೆಗಳಲ್ಲಿ ದಾಖಲು ಮಾಡಲಾಗುತ್ತಿದೆ NCLP ಹಾಗೂ SCLP ಶಾಲೆಗಳನ್ನು ಮಂಜೂರು ಮಾಡಿ ಶಿಕ್ಷಣ ಹಾಗೂ ಪುನರ್‌ವಸತಿ ಕಲ್ಪಿಸಲಾಗುತ್ತಿದೆ

ಇ) ಬಾಲ ಕಾರ್ಮಿಕ ಪದ್ದತಿಯ ವಿರುದ್ದ ಅನೇಕ ಪ್ರಚಾರ ಕಾರ್ಯಕ್ರಮಗಳನ್ನು ರಾಜ್ಯಾದಾದ್ಯಂತ ಹಮ್ಮಿಕೊಳ್ಳಲಾಗುತ್ತಿದ್ದು, ಭಿತ್ತಿ ಪತ್ರಗಳು ಕರಪತ್ರಗಳು ಪೋಸ್ಟರ್‌ಗಳು ಸ್ಟಿಕರ್‌ಗಳು ಮುಂತಾದವುಗಳನ್ನು ಹಂಚಲಾಗುತ್ತಿದೆ ಪ್ರತಿ ವರ್ಷದಲ್ಲಿ ಜೂನ್ 12 ರಮದು ವಿಶ್ವ ಬಾಲ ಕಾರ್ಮಿಕರ ಪದ್ಧತಿ ವಿರೋದಿ ದಿನದಂದು ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ಪ್ರಾಯೋಜಿಸಲಾಗುತ್ತಿದೆ

ಈ) ಜೊತೆಗೆ ತರಬೇತಿ ಕಾರ್ಯಕ್ರಮಗಳು, ಕಾರ್ಯಾಗಾರಗಳು ವಿಚಾರ ಸಂಕೀರ್ಣಗಳು ಸಮ್ಮೇಳನಗಳು, ಜಾಥಾಗಳು ಬೀದಿ ನಾಟಕಗಳು ಸಾಕ್ಷ್ಯ ಚಿತ್ರ ನಿರ್ಮಾಣಗಳು ಮತ್ತು ಚಲನಚಿತ್ರ ಮಂದಿರಗಳಲ್ಲಿ ಸ್ಲೈಡ್‌ಗಳ ಪ್ರದರ್ಶನವನ್ನು ಸಹ ಮಾಡಲಾಗುತ್ತಿದೆ

ಇ) ಅಪಾಯಕಾರಿ ಹಾಗೂ ಅಪಾಯಕಾರಿಯಲ್ಲದ ಉದ್ದಿಮೆಗಳಲ್ಲಿ ಬಾಲ ಕಾರ್ಮಿಕರ ನೇಮಕಾತಿಯನ್ನು ತಡೆಯಲು ಕಾರ್ಮಿಕ ಇಲಾಖೆಯಲ್ಲಿ ತನಿಖಾ ತಂಡಗಳನ್ನು ರಚಿಸಲಾಗಿದ್ದು ಪ್ರತಿ ತಿಂಗಳು ಈ ತನಿಖಾ ತಂಡಗಳನ್ನು ಎಲ್ಲಾ ಉದ್ದಿಮೆಗಳಿಗೆ ಹರಾತ್ ಬೇಟಿ ನೀಡಿ ಬಾಲ ಕಾರ್ಮಿಕರನ್ನು ನೇಮಿಸಿಕೊಂಡ ಎಲ್ಲಾ ಉದ್ದಿಮೆಗಳ ಮಾಲೀಕರ ವಿರುದ್ಧ ಮೊಕದ್ದಮೆಯನ್ನು ಹೂಡಲಾಗುತ್ತಿದೆ ಕನಿಷ್ಟ ವೇತನಕ್ಕಿಂತ ಕಡಿಮೆ ವೇತನವನ್ನು ಪಾವತಿ ಮಾಡುವ ಬಗ್ಗೆ ಕ್ಲೈಮ್ ಅರ್ಜಿಗಳನ್ನು ಸಂಬಂದ ಪಟ್ಟ ಪ್ರಾಧಿಕಾರದ ಮುಂದೆ ಸಲ್ಲಿಸಲಾಗಿರುತ್ತದೆ ಇದು ಅಲ್ಲದೆ ದಾಳಿಯ ವೇಲೆ ಪತ್ತೆ ಹಚ್ಚಲ್ಪಟ್ಟ ಬಾಲ ಕಾರ್ಮಿಕರನ್ನು ಕ್ರಿಯಾ ಯೋಜನೆಯಡಿಯಲ್ಲಿ ಪ್ರಾರಂಭಿಸಲಾಗಿರುವ ವಿಶೇಷ ವಸತಿ ಶಾಲೆಗಳಲ್ಲಿ ಸೇರಿಸಿ ಅವರನ್ನು ಪುನರ್ವಸತಿಗೊಳಿಸಲಾಗುತ್ತದೆ

ಅಪಾಯಕಾರಿ ಅಥವಾ ಅಪಾಯಕಾರಿ ಅಲ್ಲದ ಉದ್ದಿಮೆಗಳಲ್ಲಿ ಗುರುತಿಸಿದ ಬಾಲ ಕಾರ್ಮಿಕರನ್ನು ಅವರ ಕಲಿಕಾ ಸಾಮರ್ಥ್ಯದ ಮೇರೆಗೆ ರಾಷ್ಟ್ರೀಯ ಬಾಲ ಕಾರ್ಮಿಕ ಕ್ರಿಯಾ ಯೋಜನೆಯಡಿಯಲ್ಲಿ ನಡೆಯುತ್ತಿರುವ ವಿಶೇಷ ಶಾಲೆಗಳಲ್ಲಿ ದಾಖಲಿಸಲಾಗುತ್ತಿದೆ ಈ ಮಕ್ಕಳಿಗೆ ಆರು ತಿಂಗಳಿಂದ ಎರಡು ವರ್ಷದವರೆಗೂ ಅನೌಪಚಾರಿಕ ಶಿಕ್ಷಣವನ್ನು ನೀಡಿ ಅವರನ್ನು ಮುಖ್ಯವಾಹಿನಿಗೆ ಶಾಲೆಗೆ ದಾಖಲಿಸಲಾಗುತ್ತದೆ ಇದಲ್ಲದೆ ಕೆಲವು ಬಾಲ ಕಾರ್ಮಿಕರನ್ನು ನೇರವಾಗಿ ಮುಖ್ಯವಾಹಿನಿ ಶಾಲೆಗೆ ದಾಖಲಿಸಲಾಗುತ್ತದೆ

ಅಪಾಯಕಾರಿ ಉದ್ದಿಮೆಯಿಂದ ಬಿಡುಗಡೆಗೊಂಡ ಕಾರ್ಮಿಕನ ಕುಟುಂಬದ ಸದಸ್ಯನಿಗೆ ರಾಜ್ಯ ಸರ್ಕಾರವು ಹಮ್ಮಿಕೊಂಡಿರುವ ವಿವಿಧ ಬಡತನ ನಿರ್ಮೂಲನಾ ಯೋಜನೆ ಅಡಿಯಲ್ಲಿ ಉದ್ಯೋಗವನ್ನು ನೀಡಲು ಯೋಜನೆಯನ್ನು ರೂಪಿಸಲಾಗಿದೆ

ಅನುಬಂದ

ಕಳೆದ ವರ್ಷ ರಾಜ್ಯದಲ್ಲಿ ಬಾಲ ಕಾರ್ಮಿಕರ ಜಿಲ್ಲಾವಾರು ವಿವರ

ಕ್ರ.ಸಂ	ವರ್ಷ	ಬಾಲಕಾರ್ಮಿಕರ ಸಂಖ್ಯೆ
1	ಬೆಂಗಳೂರು ಗ್ರಾಮಾಂತರ	
2	ಬೆಂಗಳೂರು ನಗರ	963
3	ಬೆಳಗಾಂ	–
4	ಬಳ್ಳಾರಿ	168
5	ಬೀದರ್	47
6	ಬಿಜಾಪುರ	13
7	ಬಾಗಲಕೋಟೆ	42
8	ಚಿಕ್ಕಮಗಳೂರು	47

9	ಚಿತ್ರದುರ್ಗ	111
10	ಚಾಮರಾಜನಗರ	939
11	ಮಂಗಳೂರು	72
12	ದಾವಣಗೆರೆ	939
13	ಧರವಾಢ	204
14	ಗುಲ್ಬರ್ಗಾ	540
15	ಗದಗ	14
16	ಹಾಸನ	173
17	ಹಾವೇರಿ	30
18	ಮಡಿಕೇರಿ	31
19	ಕೋಲಾರ	131
20	ಕೊಪ್ಪಳ	29
21	ಮಂಡ್ಯ	360
22	ಮೈಸುರು	244
23	ರಾಯಚೂರು	35
24	ಶಿವಮೊಗ್ಗ	46
25	ತುಮಕೂರು	93
26	ಕಾರವಾರ	–
27	ಉಡುಪಿ	21
	ಒಟ್ಟು	**5292**